ದಿನಾಂಕಃ 24.11.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು:- 1 ನೇ ಪ್ರತಿವಾದಿ ಪರ ವಕೀಲರಿಂದ-

ನಮ್ಮ ತಂದೆಯ ಹೆಸರು ಹೊಸಳ್ಳಿ ಮಲ್ಲಪ್ಪ ಎಂದರೆ ಸರಿ. ನನ್ನ ತಂದೆಗೆ ನಾನು ಪ್ರತಿವಾದಿಗಳು ಮಕ್ಕಳು ಎಂದರೆ ಸರಿ. ನಮಗೆ 4 ಜನ ಸಹೋದರಿಯರು ಇದ್ದಾರೆ ಎಂದರೆ ಸರಿ. ನಮ್ಮ ಸಹೋದರಿಯರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ದಿನಾಂಕ 09.03.1982 ರಂದು ತೀರಿಕೊಡಿಂದ್ದಾರೆ ಎಂದರೆ ಸರಿ. ನನ್ನ ತಾಯಿ ನಾಗಮ್ಮ ದಿನಾಂಕ 25.09.1993 ರಂದು ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ 4 ಜನ ಸಹೋದರಿಯರ ಮದುವೆ ನಮ್ಮ ತಂದೆ ಮರಣ ಹೊಂದುವ ಪೂರ್ವದಲ್ಲಿ ಆಗಿತ್ತು ಎಂದರೆ ಸರಿಯಲ್ಲ, ಇಬ್ಬರದ್ದು ಮಾತ್ರ ಆಗಿತ್ತು. 1 ನೇ ಪ್ರತಿವಾದಿ 1975 ರಲ್ಲಿಯೇ ಬಿ.ಎಸ್.ಸಿ ಪದವಿದಾರರು ಎಂದರೆ ಸಾಕ್ಷಿಯು ಪದವಿ ಪೂರ್ಣ ಆಗಿಲ್ಲ ಎನ್ನುತ್ತಾರೆ. ನಾನು ಬಿ.ಎ ಪದವಿ ಹೊಂದಿದ್ದೇನೆ. ನನ್ನ ಪದವಿ 1986 ರಲ್ಲಿ ಪೂರ್ಣ ಆಗಿದೆ. ನಾನು ಪಿ.ಯು.ಸಿ ಅಂಕ ಪಟ್ಟಿಯ ಆಧಾರದ ಮೇಲೆ ಕೆಲಸಕ್ಕೆ ಸೇರಿದ್ದೆನು. ನಾನು ಇಂಡಿಯನ್ ಏರ್ ಫೋರ್ಸ್ ನಲ್ಲಿ ಏರ್ ಮ್ಯಾನ್ ಎಂದು ಕೆಲಸ ಮಾಡಿದ್ದೇನೆ. ನಾನು ಫೆಬ್ರುವರಿ ತಿಂಗಳು 1994 ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ್ದೇನೆ. ಅಲ್ಲಿಂದ ನಿವೃತಿಗೊಂಡ ಮೇಲೆ ವಾಣಿಜ್ಯ ತೆರಿಗೆ ವಿಭಾಗದಲ್ಲಿ ನಿರೀಕ್ಷಕರರಾಗಿ ಸೇರಿಕೊಂಡಿರುತ್ತೇನೆ ಎಂದರೆ ಸರಿ. ನಾನು ಅಲ್ಲಿ 21 ವರ್ಷಗಳ ಕಾಲ ಸೇವೆ ಸಲ್ಲಿಸಿ 2019 ರ ಡಿಸೆಂಬರ್ ತಿಂಗಳಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು 1994 ರಿಂದ 1999 ರ ಮಧ್ಯದಲ್ಲಿ ಚಾರ್ಟೆಡ್ ಅಕೌಂಟ್ ಕಛೇರಿಯಲ್ಲಿ ಕೂಡ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸೇವೆ ಸಲ್ಲಿಸಿದ ಕಾಲದಲ್ಲಿನ ವರಮಾನದ ಲೆಕ್ಕ ಪತ್ರಗಳನ್ನು ಇಟ್ಟಿಲ್ಲ.

2. ನಾನು ಮೂಲ ದಾವೆ 20/2014 ರಲ್ಲಿ ಜಿ.ಪಿ.ಎ ರವರ ಮೂಲಕ ಹಾಜರಾಗಿದ್ದೆ ಎಂದರೆ ಸರಿ. ಆ ಜಿ.ಪಿ.ಎ ಇನ್ನೂ ಕ್ಯಾನ್ಸಲ್ ಮಾಡಿಲ್ಲ ಎಂದರೆ ಸಾಕ್ಷಿಯು ಆ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಮಾತ್ರ ಕೊಟ್ಟಿದ ಕಾರಣ ಕ್ಯಾನ್ಸಲ್ ಮಾಡಿಲ್ಲ ಎನ್ನುತ್ತಾರೆ. ಆ ಜಿ.ಪಿ.ಎ ಕ್ಯಾನ್ಸಲ್ ಮಾಡದ ಕಾರಣ ಈ ಪ್ರಕರಣ ಹಾಕಲು ನನಗೆ ಬರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿರುವ ಆಸ್ತಿಗಳ ವಿವರಗಳನ್ನು ಮತ್ತು ಚಕ್ಕು ಬಂಧಿಗಳನ್ನು ನಮ್ಮ ವಕೀಲರಿಗೆ ನಾನೇ ಕೊಟ್ಟಿದ್ದೇನೆ. ದಾವಾ ಐಟಂ ನಂ.18 ರ ಚೆಕ್ಕು ಬಂಧಿ ನನಗೆ ದಾಖಲೆ ನೋಡದೆ ಹೇಳಲು ಬರುವುದಿಲ್ಲ. ಅದರ ಉತ್ತರಕ್ಕೆ ಸರ್ವೆ ನಂ.82/2 ಇದೆ ಎಂದರೆ ಸರಿ. ವಾದ ಪತ್ರದಲ್ಲಿ ಗ್ಯಾರಮರಡಿ ಅವರ ಜಮೀನು ಎಂದು ತೋರಿಸಿರುವುದು ತಪ್ಪು ಎಂದರೆ ಸಾಕ್ಷಿಯು ತಪ್ಪಾಗಿರಬಹುದು ಎನ್ನುತ್ತಾರೆ. ಗ್ಯಾರಮರಡಿ ಎಂದರೆ ಒಂದು ಗ್ರಾಮ ಎಂದರೆ ಸರಿ. ಅದರ ಆಧಾರದ ಮೇಲೆ ಜಮೀನನ್ನು ಗುರುತಿಸುವುದು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ

ನಂ. 17 ಅಂದರೆ ಸರ್ವೆ ನಂ.82/2 ರ ದಕ್ಷಿಣಕ್ಕೆ ಸರ್ವೆ ನಂ.82/3 ಬರುತ್ತದೆ ಎಂದರೆ ಸರಿ. ಸರ್ವೆ ನಂ. ನಂ.82/3 ರ ಒಟ್ಟು ವಿಸ್ತೀರ್ಣ 9 ಎಕರೆ 20 ಗುಂಟೆ ಎಂದರೆ ಸರಿ. ದಾವಾ ಐಟಂ ನಂ.15 ಅಂದರೆ ಸರ್ವೆ ನಂ.65/3 ರಲ್ಲಿ 1 ಎಕರೆ 18 ಗುಂಟೆ ಜಮೀನು ಇದೆ ಎಂದರೆ ಸರಿ. ದಾಖಲೆ ನೋಡದೆ ಸದರಿ ಜಮೀನಿನ ಚಕ್ಕು ಬಂಧಿ ಹೇಳಲು ಬರುವುದಿಲ್ಲ. ಅದರ ಪೂರ್ವಕ್ಕೆ ಸರ್ವೆ ನಂ.97/ಪಿ-2 ಬರುತ್ತದೆ ಎಂದರೆ ಸರಿ, ಅದು ನಮಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ.13 ಅಂದರೆ ಸರ್ವೆ ನಂ.45/1 ವಿಟ್ಟಲಾಪುರದಲ್ಲಿ ಇರುತ್ತದೆ ಎಂದರೆ ಸರಿ. ಅದರ ಪಶ್ಚಿಮ ದಿಕ್ಕಿಗೆ ಸರ್ವೆ ನಂ.32/5 ಜಮೀನು ಇರುತ್ತದೆ ಎಂದರೆ ನೆನಪಿಲ್ಲ. ಆ ಜಮೀನು ಕೂಡ ನಮಗೆ ಸೇರಿದ್ದು ಎಂದರೆ ಸರಿ. ಆ ಜಮೀನು ಈ ಪ್ರಕರಣದ ಐಟಂ ನಂ.12 ಇರುತ್ತದೆ ಎಂದರೆ ಸರಿ.

3. ದಾವಾ ಐಟಂ ನಂ.12 ರ ಪೂರ್ವಕ್ಕೆ ಸರ್ವೆ ನಂ.45/1 ಇದ್ದು ಅದರ ವಿಸ್ತೀರ್ಣ 1 ಎಕರೆ 22 ಗುಂಟೆ ಇದೆ ಎಂದರೆ ಸರಿ. ದಾವಾ ಐಟಂ ನಂ.11 ರಲ್ಲಿ 19 ಗುಂಟೆ ಜಮೀನು ಇದೆ ಎಂದರೆ ಸರಿ. ಅದರ ಉತ್ತರಕ್ಕೆ ಅಸೆಸ್ಮೆಂಟ್ ನಂ.94/39 ಬರುತ್ತದೆ ಎಂದರೆ ಸರಿ. ಅದು ದಾವಾ 'ಬಿ' ಷೆಡ್ಯೂಲ್ 2 ನೇ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ.10 ರಲ್ಲಿ 2 ಎಕರೆ ಜಮೀನು ಇದ್ದು ಅದರ ಸರ್ವೆ ನಂ.97/1 ಇರುತ್ತದೆ ಎಂದರೆ ಸರಿ. ಅದರ ಪಶ್ಚಿಮ ದಿಕ್ಕಿಗೆ ಸರ್ವೆ ನಂ.65/3 ರಲ್ಲಿ 1 ಎಕರೆ 18 ಗುಂಟೆ ಜಮೀನು ಬರುತ್ತದೆ ಎಂದರೆ ಸರಿ, ಅದು ಈ ದಾವೆಯ ಐಟಂ ನಂ.15 ಎಂದರೆ ಸರಿ. ದಾವಾ 'ಬಿ' ಷೆಡ್ಯೂಲ್ 2 ನೇ ಆಸ್ತಿಯ ದಕ್ಷಿಣ ದಿಕ್ಕಿಗೆ ಸರ್ವೆ ನಂ.99/5 ಬರುತ್ತದೆ ಎಂದರೆ ಸಾಕ್ಷಿಯು ವಾದ ಪತ್ರವನ್ನು ನೋಡಿ ಸರಿ ಎಂದು ಹೇಳುತ್ತಾರೆ ಮತ್ತು ದಾವಾ ಐಟಂ ನಂ.11 ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಸದರಿ ಆಸ್ತಿಯ ದಕ್ಷಿಣ ದಿಕ್ಕಿಗೆ ನಾವು ರುದ್ರಪ್ಪನವರ ಆಸ್ತಿ ಎಂದು ಬರೆದಿದ್ದೇವೆ ಎಂದರೆ ಸರಿ. ರುದ್ರಪ್ಪ ಎಂದರೆ 2 ನೇ ಪ್ರತಿವಾದಿ ಇರುತ್ತಾನೆ ಎಂದರೆ ಸರಿ. ದಾವಾ ಐಟಂ ನಂ.18 ರ ದಕ್ಷಿಣ ದಿಕ್ಕಿಗೆ ಚಂದ್ರಶೇಖರ್ ರವರ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ, ಸದರಿ ಚಂದ್ರಶೇಖರ ನಾನೇ ಇರುತ್ತೇನೆ ಎಂದರೆ ಸರಿ. ದಾವಾ ಐಟಂ ನಂ.17 ರ ದಕ್ಷಿಣ ದಿಕ್ಕಿಗೆ ತೋರಿಸಿರುವ ರುದ್ರಪ್ಪನವರ ಆಸ್ತಿ ಎಂದರೆ 2 ನೇ ಪ್ರತಿವಾದಿಯ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ.15 ರ ಪೂರ್ವಕ್ಕೆ ತೋರಿಸಿರುವ ಮಹೇಶ್ವರಪ್ಪ ಇವರು 1 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.13 ರ ಪಶ್ಚಿಮ ದಿಕ್ಕಿಗೆ ಮಹೇಶ್ವರಪ್ಪ, ರುದ್ರಪ್ಪ ಮತ್ತು ಚಂದ್ರಶೇಖರ್ ರವರಿಗೆ ಸೇರಿದ ಜಮೀನು ಎಂದು ತೋರಿಸಿದ್ದೇವೆ ಎಂದರೆ ಸರಿ. ಸದರಿ ವ್ಯಕ್ತಿಗಳು ನಾನು ಮತ್ತು ಪ್ರತಿವಾದಿಗಳು ಇರುತ್ತೇವೆ ಎಂದರೆ ಸರಿ.

4. ದಾವಾ ಐಟಂ.12 ರ ಪೂರ್ವಕ್ಕೆ ತೋರಿಸಿರುವ ಮಹೇಶ್ವರಪ್ಪ 1 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.10 ರ ಪಶ್ಚಿಮ ದಿಕ್ಕಿಗೆ ತೋರಿಸಿರುವ ಮಹೇಶ್ವರಪ್ಪ ಕೂಡ 1 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಸರ್ವೆ ನಂ.65/3 ಇದ್ದು ಅದರ

ಪಹಣಿ ಪತ್ರಿಕೆ 1 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂ.11/5 ರ ಉತ್ರ ದಿಕ್ಕಿಗೆ ತೋರಿಸಿರುವ ಕೌ ಷಡ್ ಅಂದರೆ ದಾವಾ ಷ್ಡ್ಯೂಲ್ -'ಬಿ' ಯಲ್ಲಿನ 2 ನೇ ಆಸ್ತಿಯು ಇರುತ್ತದೆ ಎಂದರೆ ಸರಿ. ಅದು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಐಟಂ ನಂ.13 ಕೂಡ 2 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ.

(ಈ ಹಂತರದಲ್ಲಿ ಮುಂದುವರಿದ ಪಾಟೀಸವಾಲನ್ನು ಮೂಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**ಸಹಿ/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.